ಅ) 1. ಗುಜರಾತ್‌ನ ಇತ್ತೀಚಿನ ಭೀಕರ ಭೂಕಂಪದ ಅಪಾರ ಹಾನಿಯ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಈ ವರ್ಷ ಎಲ್ಲಾ ಉತ್ಸವಗಳನ್ನು ರದ್ದುಗೊಳಿಸಲಾಗಿದೆ.

2. ಉತ್ಸವವನ್ನು ಮುಂದಿನ ವರ್ಷ ಆಚರಿಸಲು ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಜಾನುವಾರುಗಳ ಆರೋಗ್ಯ ರಕ್ಷಣೆ

1097 (1930) ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಜಾನುವಾರುಗಳೆಷ್ಟು? ಈ ಜಾನುವಾರುಗಳ ಆರೋಗ್ಯ ರಕ್ಷಣೆಗಾಗಿ ಸರ್ಕಾರದ ಮತ್ತು ಜಿಲ್ಲಾ ಪಂಚಾಯಿತಿಗಳು ಸರಬರಾಜು ಮಾಡುವ ಔಷಧಿಯ ಬೆಲೆ ಎಷ್ಟು?

ಆ) ತಲಾವಾರು ಈ ಔಷಧಿ ಕಡಿಮೆಯಲ್ಲವೇ ಇದನ್ನು ಹೆಚ್ಚಿಸಲಾಗುವುದಿಲ್ಲವೇ? ಹೆಚ್ಚಳ ಯಾವ ಪ್ರಮಾಣದಲ್ಲಿ ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಒಟ್ಟು ಜಾನುವಾರುಗಳ ಸಂಖ್ಯೆ : 306.88 ಲಕ್ಷ, (1997 ಜಾನುವಾರು ಗಣತಿ ಪ್ರಕಾರ) ಸರ್ಕಾರದಿಂದ 2000-01ನೇ ಸಾಲಿನಲ್ಲಿ ರೂ. 5,34,00,000-00, ಜಿಲ್ಲಾ ಪಂಚಾಯತ್ ವತಿಯಿಂದ ರೂ. 2,45,76,000-00.

ಆ) ಹೌದು, ಇದನ್ನು ಮುಂದಿನ ವರ್ಷ ಹೆಚ್ಚಿಸಲಾಗುವುದು. ಹಿಂದಿನ ವರ್ಷಕ್ಕಿಂತ ಈ ವರ್ಷ ಶೇಕಡಾ 8.7ರಷ್ಟು ವಂಟನವನ್ನು ಹೆಚ್ಚಿಸಲಾಗಿದೆ.

ಹುಣಸೂರು ತಾಲ್ಲೂಕಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ಪ್ರಾಚ್ಯವಸ್ತು ಸಂಗ್ರಹಕ್ಕೆ ಸೇರಿದ ದೇವಸ್ಥಾನಗಳು

1098 (1426) ಶ್ರೀ ವಿ. ಪಾಪಣ್ಣ (ಹುಣಸೂರು) : ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ಕೇಂದ್ರ ಪ್ರಾಚ್ಯವಸ್ತು ಹಾಗೂ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸೇರಿದ ದೇವಸ್ಥಾನಗಳು ಎಷ್ಟು; ಅವು ಯಾವುವು?

ಆ) ಈ ದೇವಸ್ಥಾನಗಳನ್ನು ಸಂರಕ್ಷಿಸಲು ಏನು ಕ್ರಮವನ್ನು ತೆಗೆದುಕೊಂಡಿದೆ.

ಇ) ಅಭಿವೃದ್ಧಿಪಡಿಸಲು ಯಾವ ಯಾವ ದೇವಸ್ಥಾನಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿರುತ್ತಾರೆ. (ವಿವರ ಒದಗಿಸುವುದು)

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಕೇಂದ್ರ ಪ್ರಾಚ್ಯವಸ್ತು ಇಲಾಖೆಗೆ ಸೇರಿದ ದೇವಸ್ಥಾನಗಳ ಸಂಖ್ಯೆ : ಯಾವುದೂ ಇಲ್ಲ, ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸೇರಿದ ರಾಜ್ಯ ಸಂರಕ್ಷಿತ ಸ್ಮಾರಕಗಳು : ಎರಡು

ದೇವಸ್ಥಾನಗಳ ಹೆಸರು

1. ಶ್ರೀ ಗೊಮ್ಮಟೇಶ್ವರ : ಬೆಟ್ಟದೂರು ದೇವಸ್ಥಾನ

2. ಶ್ರೀ ಕೇಶವ ದೇವಸ್ಥಾನ : ಧರ್ಮಾಪುರ

ಆ) ಇವೆರಡು ರಾಜ್ಯ ಸಂರಕ್ಷಿತ ಸ್ಮಾರಕಗಳಾಗಿವೆ. ಪ್ರಸಕ್ತ ಕ್ರಿಯಾ ಯೋಜನೆಯಲ್ಲಿ ಇದು ಸೇರ್ಪಡೆಯಾಗಿಲ್ಲದಿರುವುದರಿಂದ ಸಂರಕ್ಷಿತ ಕಾರ್ಯ ಕೈಗೊಂಡಿರುವುದಿಲ್ಲ.

ಹುಣಸೂರಿನಲ್ಲಿ ಆಟದ ಮೈದಾನದ ನಿರ್ಮಾಣ

1099 (1427) ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ಯುವಜನಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ಒಂದು ಆಟದ ಮೈದಾನವು ಮಂಜೂರಾತಿ ಆಗಿದ್ದು, ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಮಂಜೂರಾಯಿತು? ಸರ್ಕಾರದ ಆಟದ ಮೈದಾನವನ್ನು ನಿರ್ಮಿಸಲು ಏನು ಕ್ರಮವನ್ನು ತೆಗೆದುಕೊಂಡಿದೆ?

ಇ) ಹಾಗಿದ್ದಲ್ಲಿ ಈ ಕೆಲಸ ಮಂದಗತಿ ಆಗಲು ಕಾರಣ ಏನು?

ಶ್ರೀ ಎಸ್. ಎಸ್. ಮಲ್ಲಿಕಾರ್ಜುನ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಹುಣಸೂರು ತಾಲ್ಲೂಕಿನಲ್ಲಿ ರಂಗಮಂದಿರದ ನಿರ್ಮಾಣ

1100 (1428) ಶ್ರೀ ವಿ. ಪಾಪಣ್ಣ (ಹುಣಸೂರು) : ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ರಂಗಮಂದಿರವನ್ನು ಕಟ್ಟಿಸಲು ಒಂದು ಯೋಜನೆಯು ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಹುಣಸೂರು ಪಟ್ಟಣದಲ್ಲಿ ರಂಗಮಂದಿರವನ್ನು ಯಾವಾಗ ನಿರ್ಮಿಸಲಾಗುವುದು. ಇದಕ್ಕಾಗಿ ಕೈಗೊಂಡ ಕ್ರಮಗಳೇನು?